ಮುಂದೆ ಅವನ ಓದಿಗೆ ಮಾರ್ಗದರ್ಶಕನಾಗುವ ಪಾತ್ರ, ಗುರುನಾಥ ಉಪಾಧ್ಯಾಯನದು. ಈ ಪಾತ್ರ ಮಂಟೇಸ್ವಾಮಿ ಪರಂಪರೆಯಲ್ಲಿ ಗುರು ಮತ್ತು ಗುಡ್ಡರ ಪರಂಪರೆಯನ್ನು ಒಂದು ಕ್ಷಣ ಕಣ್ಮುಂದೆ ಕಟ್ಟುವಂತೆ ಮಾಡುತ್ತದೆ. ಈ ರೀತಿಯ ಮೇಷ್ಟ್ರುಗಳು ಇಂದಿನ ಸಮಾಜಕ್ಕೆ ಅಗತ್ಯವಾಗಿ ವಿದ್ಯಾರ್ಥಿಗಳಿಗೆ ಬೇಕು. ಇಲ್ಲದಿದ್ದರೆ ಇಡೀ ಶಿಕ್ಷಣ ವ್ಯವಸ್ಥೆ ಮತ್ತು ವಿದ್ಯಾರ್ಥಿಗಳು ದಿಕ್ಕುತಪ್ಪುವ ಸಂಭವ ಎದುರಾಗುತ್ತದೆ.

ಕನ್ನಮರಿಯು ಓದಲೆಂದು ನಗರದ ವಿಶ್ವವಿದ್ಯಾನಿಲಯದ ಆವರಣಕ್ಕೆ ಬರುತ್ತಾನೆ. ಅಲ್ಲಿನ ರಾಜಕೀಯದ ದಾಳವಾಗಿ ಅವನು ಬಳಕೆಯಾದದ್ದು, ಇಂದಿನ ವಿಶ್ವವಿದ್ಯಾಲಯಗಳು ಓದು-ಸಂಶೋಧನೆಯ ಕೆಲಸಗಳಾಚೆಗೆ ತಮ್ಮ ವೈಯಕ್ತಿಕ ಹಿತಾಸಕ್ತಿ ಮತ್ತು ಅಧಿಕಾರದ ಇಚ್ಛಾಶಕ್ತಿಯಿಂದಾಗಿ ಯಾವ ಸ್ಥಿತಿಗೆ ತಲುಪಿವೆ ಎನ್ನುವುದನ್ನು ಕಾದಂಬರಿ ವಿವರಿಸುತ್ತದೆ. ಶಿಕ್ಷಣ ಕ್ಷೇತ್ರಗಳಲ್ಲಿನ ಒಳಜಗಳಗಳು, ಅಧಿಕಾರದಾಹ, ಸ್ವಜನ ಪಕ್ಷಪಾತಗಳಂತಹ ಸಣ್ಣತನಗಳು ಶೈಕ್ಷಣಿಕ ವಾತಾವರಣವನ್ನು ಹೇಗೆ ನಾಶಮಾಡಬಲ್ಲವು ಎನ್ನುವುದನ್ನು ಕಾದಂಬರಿ ಕಟ್ಟಿಕೊಟ್ಟಿದೆ. ವಿದ್ಯಾರ್ಥಿಗಳನ್ನು ದಿಕ್ಕು ತಪ್ಪಿಸುವ ವಿಧಾನ, ಗುಂಪುಗಾರಿಕೆ ಮತ್ತು ವೈಯಕ್ತಿಕ ಹಿತಾಸಕ್ತಿಗಳು ಹೇಗೆ ಕೆಲಸಮಾಡುತ್ತವೆ ಎನ್ನುವುದನ್ನು ಈ ಕೃತಿ ತಿಳಿಸುತ್ತದೆ.

ಕನ್ನಮರಿಯು ನೋಡಲು ಒರಟನಂತೆ ಕಂಡರೂ ಮಗು ಮನಸಿನ ಮುಗ್ಧತೆ, ನಿಷ್ಕಲ್ಮಶ ಮನಸ್ಸಿನ ವ್ಯಕ್ತಿಯಾಗಿದ್ದಾನೆ. ಚಂಪಕಾ ಪಟೇಲ್ ಎನ್ನುವ ಶ್ರೀಮಂತ ಮತ್ತು ಸುಂದರ ಹೆಣ್ಣಿನ ಸ್ನೇಹ ದೊರೆತಾಗಲೂ ಕನ್ನಮರಿ ಅವಳೊಟ್ಟಿಗೆ ನಡೆದುಕೊಳ್ಳುವ ರೀತಿ ನಾಗರಿಕ ಸಮಾಜದಲ್ಲಿ ಬೆಳೆದ ಬಹುತೇಕರಲ್ಲಿ ಕಾಣಲು ಸಾಧ್ಯವಿಲ್ಲದಂತಹದ್ದು. ಚಂಪಕಾ ಕೆಲವು ಸಾರಿ ಇವನ ಮುಗ್ಧತೆ ಮತ್ತು ಒರಟುತನಗಳೆರಡನ್ನೂ ಮನಸಾರೆ ಮೆಚ್ಚಿಕೊಳ್ಳುತ್ತಾಳೆ. ಆದರೆ ಅವಳು ತನ್ನ ಮೆಚ್ಚುಗೆಯನ್ನು ಎಂದೂ ಅವನೆದುರು ಬಹಿರಂಗಪಡಿಸುವುದಿಲ್ಲ. ಈ ವಿಚಿತ್ರ ನಡವಳಿಕೆಗೆ ಅವಳ ಮಾನಸಿಕ ತೊಳಲಾಟ, ಸಂಕಟ, ಸಮಸ್ಯೆಗಳೇ ಕಾರಣವೆನಿಸುತ್ತದೆ. ಶ್ರೀಮಂತಿಕೆ ಎನ್ನುವ ಬಂಧ ಮತ್ತು ಭಯಗಳು ಅವಳನ್ನು ಈ ರೀತಿ ಕಟ್ಟಿಹಾಕಿವೆ. ಆದರೂ ತನ್ನ ಮನಸಿನ ಸಂಕಟ, ಸಂಭ್ರಮಗಳೆಲ್ಲವನ್ನು ಚಂಪಕಾ ಕನ್ನಮರಿಯ ಜೊತೆ ಹಂಚಿಕೊಳ್ಳುವಷ್ಟು ಅವರಿಬ್ಬರಲ್ಲಿ ಸ್ನೇಹ ಮತ್ತು ನಂಬಿಕೆ ಬೆಳೆದಿರುತ್ತದೆ. ಚಂಪಕಾಳ ಎಲ್ಲಾ ವಿಚಾರ ತಿಳಿದಾಗಲೂ ಇಬ್ಬರ ಸ್ನೇಹಕ್ಕೆ ಕುಂದುಬರುವುದಿಲ್ಲ. ಆಕಾಶ ಮತ್ತು ಭೂಮಿಗಳ ಸಮ್ಮಿಲನದಂತೆ ಇಬ್ಬರ ಒಡನಾಟ ಒಂದು ಅನಿರೀಕ್ಷಿತ ಕಾಮನಬಿಲ್ಲಿನಂತೆ ಬಂದು ಮರೆಯಾಗುತ್ತದೆ.

ಚಂಪಕಾ ಮತ್ತು ಕ್ರಿಸ್ಟೀನಾ, ಕನ್ನಮರಿಯ ಬದುಕಿನಲ್ಲಿ ಬರುವ ಬಹಳ ಮುಖ್ಯವಾದ ಪಾತ್ರಗಳಾಗಿವೆ. ಕನ್ನಮರಿ ಈ ಇಬ್ಬರೊಂದಿಗೆ ನಡೆದುಕೊಳ್ಳುವ ವಿಧಾನ ಅವನಿಗೆ ಒಂದು ರೀತಿಯ ಸವಾಲಿನದ್ದು ಮತ್ತು ಪ್ರಾಮಾಣಿಕತೆಗೆ ತನ್ನನ್ನು ತಾನೇ ಒಡ್ಡಿಕೊಳ್ಳುವ ನಿಕಷದಂತಿದೆ.

ಕನ್ನಮರಿಯ ಓದು ಮುಗಿದು ಕೆಲಸಕ್ಕಾಗಿ ಅಲೆಯುವ ಪ್ರಸಂಗವಂತೂ ಇಂದಿನ ವಿದ್ಯಾವಂತ ಯುವಕರು ಎದುರಿಸುತ್ತಿರುವ ದಾರುಣ ಸ್ಥಿತಿಗಳನ್ನು ವಿವರಿಸುತ್ತದೆ. ಓದಿಗೂ ತಾನು ಮಾಡುವ ಕೆಲಸಕ್ಕೂ ತಾಳೆಯಾಗದ ಪರಿಸ್ಥಿತಿ ಈ ಸಮಾಜ ಹದಗೆಟ್ಟಿರುವ ಸ್ಥಿತಿಯನ್ನು ತಿಳಿಸುತ್ತದೆ. ಕನ್ನಮರಿ ಕೆಲಸ ಸಿಗದಿದ್ದ ಸಮಯದಲ್ಲಿ ಎಂದೂ ಈ ವ್ಯವಸ್ಥೆಯ ಬಗೆಗಾಗಲಿ, ಇಲ್ಲಿಯ ದುಃಸ್ಥಿತಿಯ ಬಗೆಗಾಗಲಿ ದೂರುವುದಿಲ್ಲ. ಸಂಕಷ್ಟದ ಸಂದರ್ಭದಲ್ಲೂ ಅವನು ಎದೆಗುಂದದೆ ಪರಿಸ್ಥಿತಿಯನ್ನು ನಿಭಾಯಿಸುವ ರೀತಿ ಇಂದಿನ ಯುವಕರಿಗೆ ಮಾದರಿಯಾದುದು. ತಾನು ಪದವೀಧರ, ಇಂತಹುದೇ ಕೆಲಸ ಮಾಡಬೇಕು ಎಂಬ ಪರಿಧಿಯನ್ನು ಕನ್ನಮರಿ ಎಂದೂ ನಿರ್ಮಿಸಿಕೊಳ್ಳದೆ, ತನ್ನ ಆತ್ಮಸಾಕ್ಷಿ ಮತ್ತು ಆತ್ಮತೃಪ್ತಿಗಾಗಿ ಸಿಕ್ಕ ಕೆಲಸವನ್ನು ಮೇಲುಕೀಳೆಣಿಸದೆ ಚೆನ್ನಾಗಿ ನಿಭಾಯಿಸುತ್ತಾನೆ. ಬೇಕರಿ, ಹೋಟೆಲ್‌ಗಳಲ್ಲಿ ಕೆಲಸ ಮಾಡುತ್ತಾನೆ. ಬದುಕು ಕಟ್ಟಿಕೊಳ್ಳುವ ಬಡ ಮಕ್ಕಳ ಅನಿವಾರ್ಯ ಮತ್ತು ಅಸಹಾಯಕ ಸ್ಥಿತಿಯನ್ನು ಕಾದಂಬರಿ ಕಟ್ಟಿಕೊಟ್ಟಿದೆ. ನಿರುದ್ಯೋಗ ಯುವಕ ಯುವತಿಯರಲ್ಲಿ ಛಲ ಮತ್ತು ಆತ್ಮಸ್ಥೈರ್ಯವನ್ನು ತುಂಬುವಂತೆ ಕನ್ನಮರಿಯ ಪಾತ್ರವನ್ನು ಕಾದಂಬರಿಕಾರರು ಕಟ್ಟಿಕೊಟ್ಟಿದ್ದಾರೆ.

ಕನ್ನಮರಿಯಂತಹ ಯುವಕರನ್ನು ರಾಜಕಾರಣಿಗಳು ದಾಳವಾಗಿ ಬಳಸಿಕೊಳ್ಳುವ ವಿಧಾನ, ಕನ್ನಮರಿ ಅನಿರೀಕ್ಷಿತವಾಗಿ ರಾಜಕಾರಣಿಗಳ ಸಖ್ಯದೊಂದಿಗೆ ಸೇರಿಕೊಂಡಾಗ ಎದುರಾಗುವ ಸ್ಥಿತಿಯನ್ನು ಕಂಡಾಗ ಒಂದು ಕ್ಷಣ ಮರುಕ ಮತ್ತು ದಿಗ್ಭ್ರಮೆ ಉಂಟಾಗುತ್ತದೆ. ದಯಾನಂದ ಪ್ರಸಾದ ಎನ್ನುವ ರಾಜಕಾರಣಿ ಕೆಲಸಕೊಡಿಸುವ ಆಸೆ ತೋರಿ, ಕನ್ನಮರಿಯಂತಹ